**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು**

**ಸಿ ಸಿ ನಂ. 3807/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ನಾಗೇಶ | ಚಾ ಸಾ -5 |
| ತಂದೆಯ ಹೆಸರು | - | ನಿಂಗಯ್ಯ | ಪ್ರಾ ಸಾ -4 |
| ವಯಸ್ಸು | - | 46 ವರ್ಷ | |
| ಉದ್ಯೋಗ | - | ಚಾಲಕ | |
| ವಾಸ ಸ್ಥಳ | - | ಮಂಡ್ಯ | |

ದಿನಾಂಕಃ 03.10.2023 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:**

ನಾನು 2018 ರಿಂದ 2021 ರವರೆಗೆ ಕೆ ಎಂ ದೊಡ್ಡಿ ಪೋಲಿಸ್ ಠಾಣೆಯಲ್ಲಿ ಜೀಪ್ ಚಾಲಕನಾಗಿ ಕೆಲಸ ನಿರ್ವಹಿಸಿರುತ್ತೆನೆ.

ದಿ. 02.04.2019 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ನಾನು ಚಾಸಾ-1 ಮತ್ತು 4, 9 ಮತ್ತು 10 ರವರೊಂದಿಗೆ ಕ್ಯಾತಘಟ್ಟದಲ್ಲಿ ಗಸ್ತು ಮಾಡುತ್ತಿದ್ದಾಗ, ಚಾಸಾ-1 ರವರಿಗೆ ಕಾರ್ಕಳ್ಳಿಯ ರಮೇಶ ಬಿನ್ ಸುಬ್ಬೇಗೌಡ ತಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಇಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ಸದರಿ ವಿಚಾರವನ್ನು ನಮಗೆ ತಿಳಿಸಿ ಅವರೊಂದಿಗೆ ಕಾರ್ಕಳ್ಳಿಗೆ ಹೋಗಿ ಸರ್ಕಲ್ ಬಳಿ ಇದ್ದ ಪಂಚರಾದ ಚಾಸಾ-2 ಮತ್ತು 3 ರವರಿಗೆ ವಿಚಾರ ತಿಳಿಸಿ ಪಂಚರಾಗಿ ಬರಮಾಡಿಕೊಂಡು ಮಾಹಿತಿ ಇದ್ದ ಸ್ದಳಕ್ಕೆ ರಾತ್ರಿ 8.30 ಗಂಟೆಗೆ ಹೋಗಿ ನೋಡಲಾಗಿ ಅಂಗಡಿಯಲ್ಲಿ ಒಬ್ಬ ವ್ಯಕ್ತಿ ಇದ್ದನು. ಆತನನ್ನು ವಿಚಾರಿಸಿದಾಗ ತನ್ನ ಹೆಸರು ರಮೇಶ ಬಿನ್ ಸುಬ್ಬೇಗೌಡ ಎಂದು ತಿಳಿಸಿರುತ್ತಾನೆ. ಮಾರಾಟ ಮಾಡಲು ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ.

ಸದರಿ ಅಂಗಡಿಯನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಒಂದು ರಟ್ಟಿನ ಬಾಕ್ಸ್ ನಲ್ಲಿ 90 ಎಂಎಲ್ ನ ಹೆ ವರ್ಡ್ಸ್ ಚಿಯರ್ಸ್ ವಿಸ್ಕಿಯ 33 ಪೌಚ್ ಗಳು ಇದ್ದು ಒಂದು ಪೌಚ್ ಮದ್ಯವನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಪ್ಯಾಕ್ ಮಾಡಿ ಸಿಲ್ ಮಾಡಿರುತ್ತೆವೆ. ಪಂಚರ ಸಮಕ್ಷಮ ಮಹಜರ್ ನ್ನು ರಾತ್ರಿ 8.30 ರಿಂದ 9.45 ಗಂಟೆಯರವರೆಗೆ ಮಾಡಿರುತ್ತೇವೆ.

ನಂತರ ಠಾಣೆಗೆ ಮಾಲಿನೊಂದಿಗೆ ಮತ್ತು ಆರೋಪಿಯೊಂದಿಗೆ ವಾಪಸ್ಸು ಬಂದು ಮುಂದಿನ ಕ್ರಮವನ್ನು ಚಾಸಾ-1 ರವರು ಕೈಗೊಂಡಿರುತ್ತಾರೆ. ತನಿಖಾಧಿಕಾರಿಗಳಿಗೆ ನಾನು ಹೇಳಿಕೆ ನೀಡಿರುತ್ತೇನೆ.

ಎಂಒ-1 ಮತ್ತು ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಕೆ ವಿ ವಿ ವಕೀಲರಿಂದಃ**

ಘಟನೆ ನಡೆಯುವಾಗ ಕ್ಯಾತಘಟ್ಟ ಗ್ರಾಮದಲ್ಲಿ ಗಸ್ತಿನಲ್ಲಿದ್ದೇವು. ಘಟನೆ ದಿನ ನಾವು ಕ್ಯಾತಘಟ್ಟ ಗ್ರಾಮದಲ್ಲಿ ಗಸ್ತಿನಲ್ಲಿಯೇ ಇದ್ದೇವು. ಠಾಣೆಯನ್ನು ಸುಮಾರು 7.30 ಗಂಟೆಗೆ ಬಿಟ್ಟು ನೇರವಾಗಿ ಕ್ಯಾತಘಟ್ಟಕ್ಕೆ ಹೋಗಿರುತ್ತೇವೆ. 8.30 ಗಂಟೆಗೆ ಕಾರ್ಕಳ್ಳಿಗೆ ಹೋಗಿರುತ್ತೇವೆ. ಠಾಣೆಗೂ ಘಟನಾ ಸ್ದಳಕ್ಕೂ ಸುಮಾರು 10 ಕಿ.ಮೀ ದೂರವಿದೆ. ನಾವು ನೇರವಾಗಿ ಮಾಹಿತಿ ಬಂದ ನಂತರ ಘಟನಾ ಸ್ದಳಕ್ಕೆ ಹೋಗಿರುತ್ತೇವೆ. ಘಟನಾ ಸ್ದಳಕ್ಕೆ ನಾನು, ಚಾಸಾ-1, ಶ್ರೀನಿವಾಸ ಮತ್ತು ಎ ಎಸ್ ಐ ಸುದರ್ಶನ್ ಹೋಗಿರುತ್ತೇವೆ. ಮಾಹಿತಿ ಕೊಟ್ಟ ಇಬ್ಬರೂ ವ್ಯಕ್ತಿಗಳು ಸಹ ಬಂದಿದ್ದರು. ನಾನು ಘಟನಾ ಸ್ದಳದಲ್ಲಿ ಎನು ಮಾಡಿರುವುದಿಲ್ಲ, ಜೀಪಿನಲ್ಲಿ ಇದ್ದೇನು. ಮದ್ಯವನ್ನು ಚಾಸಾ-1 ರವರು ಅಮಾನತ್ತು ಪಡಿಸಿಕೊಂಡರು. ಸದರಿ ಸಮಯದಲ್ಲಿ ನಾನು ಅವರ ಪಕ್ಕದಲ್ಲಿಯೇ ಇದ್ದೇನು. ರಾಸಾಯನಿಕ ಪರೀಕ್ಷೆಗೆ ಎಲ್ಲಾ ಮದ್ಯವನ್ನು ಪ್ಯಾಕ್ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮದ್ಯದ ಬ್ಯಾಚ್ ನಂಬರ್ ಮತ್ತು ನಿರ್ಮಾಣದ ದಿನಾಂಕದ ಬಗ್ಗೆ ನನಗೆ ಎನು ಗೊತ್ತಿಲ್ಲ. ನನ್ನ ಸಮಕ್ಷಮ ಮಹಜರು ಮಾಡಿ ಮದ್ಯ ಅಮಾನತ್ತು ಪಡಿಸಿಕೊಂಡ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತಾರೆ, ಆದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಆರೋಪಿಯನ್ನು ಈ ದಿನವೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ದಳ ಚಿಲ್ಲರೆ ಪೆಟ್ಟಿ ಅಂಗಡಿಯಾಗಿದ್ದು ಮನೆಗೆ ಹೊಂದಿಕೊಂಡತೆ ಇತ್ತು. ಆರೋಪಿ ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ, ಅವರು ಯಾವತ್ತು ಸಹ ಮದ್ಯ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ, ಆದರೂ ಸಹ ಠಾಣಾ ಅಂಕಿ ಅಂಶಗಳಿಗಾಗಿ ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮು ಮಾ.1 ರಂತಹ ಮದ್ಯದ ಪೌಚ್ ಗಳು ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸಿಗುತ್ತದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ**

(ತೆಃನ್ಯಾಃದಲ್ಲಿ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

**ಪಿಸಿಜೆ ಮತ್ತು ಜೆಎಂಎಫ್‌ಸಿ.,**
**ಮದ್ದೂರು.**